ನೆಲಮಂಗಲ ಕ್ಷೇತ್ರದ ಗ್ರಾಮಗಳಿಗೆ ಪಶುಚಿಕಿತ್ಸಾಲಯ ಮಂಜೂರಾತಿ

698 - ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ನೆಲಮಂಗಲ ಕ್ಷೇತ್ರದ ಕಸಬಾ ಹೋಬಳಿ ಶ್ರೀನಿವಾಸಪುರ ಮತ್ತು ದೊಡ್ಡ ಬಳ್ಳಾಪುರ ತಾಲ್ಲೂಕು ಮಧುರೆ ಹೋಬಳಿ ಇಸ್ಕೂರು ಹಾಗೂ ರಾಮದೇವನಹಳ್ಳಿ ಗ್ರಾಮಗಳಿಗೆ ಪಶು ಚಿಕಿತ್ಸಾಲಯ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಇದುವರೆಗೂ ಚಿಕಿತ್ಸಾಲಯಗಳನ್ನು ತೆಗೆದಿರಲು ಕಾರಣಗಳೇನು? ಹಾಗೂ ತೆರೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) 1990-91ನೇ ಸಾಲಿನಲ್ಲಿ ಇಸ್ಕೂರು ಗ್ರಾಮಕ್ಕೆ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸಲು ಮಂಜೂರಾತಿ ನೀಡಿದೆ.

ಉಳಿದ ಗ್ರಾಮಗಳಿಗೆ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಪಶುಪಾಲನಾ ಇಲಾಖೆ ನಿರ್ದೇಶಕರಿಂದ ಪ್ರಸ್ತಾವನೆ ಬಂದಿಲ್ಲದೆ ಇರುವುದರಿಂದ ಮಂಜೂರಾತಿ ನೀಡಿರುವುದಿಲ್ಲ.

1992-93ನೇ ಸಾಲಿನಲ್ಲಿ ಆ ಗ್ರಾಮಗಳಿಗೆ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ಬೆಂಗಳೂರು ನಗರದಲ್ಲಿರುವ ಪೋಲೀಸ್ ಠಾಣೆಗಳ ಸಂಖ್ಯೆ

268 - ಶ್ರೀ ಪೆರಿಕಲ್ ಮಲ್ಲಪ್ಪ (ಚಿಕ್ಕಪೇಟೆ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಬೆಂಗಳೂರು ನಗರದಲ್ಲಿರುವ ಪೋಲೀಸ್ ಠಾಣೆಗಳು ಪೋಲೀಸ್ ಔಟ್ ಪೋಸ್ಟ್‌ಗಳು ಸೇರಿದಂತೆ ಇರುವ ಸಂಖ್ಯೆ ಎಷ್ಟು?

ಆ) ಈ ಪೋಲೀಸ್ ಠಾಣೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೋಲೀಸ್ ಸಿಬ್ಬಂದಿ ಎಷ್ಟು?

ಇ) ಈ ಪೋಲೀಸ್ ಠಾಣೆಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳೆಷ್ಟು?

ಈ) ಬೆಂಗಳೂರು ನಗರದಲ್ಲಿ ಹೊಸದಾಗಿ ತೆರೆಯಲು ಉದ್ದೇಶಿಸಿರುವ ಪೋಲೀಸ್ ಠಾಣೆಗಳ ಸಂಖ್ಯೆ ಎಷ್ಟು?

ಉ) ಈ ಹೊಸ ಪೋಲೀಸ್ ಠಾಣೆಗಳಿಗೆ ಸಿಬ್ಬಂದಿಯನ್ನು ನೇಮಕ ಮಾಡುವ ಬಗ್ಗೆ ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಪೋಲೀಸ್ ಠಾಣೆಗಳು 77
ಔಟ್ ಪೋಸ್ಟ್‌ಗಳು 5

ಆ) 4898

ಇ) ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು 4
ಸಹಾಯಕ ಸಬ್ ಇನ್ಸ್‌ಪೆಕ್ಟರಗಳು 1
ಮಹಿಳಾ ಪೇದೆಗಳು 3

ಈ) 3

ಉ) ಹೊಸ ಪೋಲೀಸ್ ಠಾಣೆಗಳಿಗೆ ಮಂಜೂರಾತಿ ನೀಡಿದ ನಂತರ ಪೋಲೀಸ್ ಸಿಬ್ಬಂದಿಯನ್ನು ನೇಮಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಹಿರೇಕೆರೂರು ತಾಲ್ಲೂಕಿನ ಮದಗಮಸೂರು ನೀರಾವರಿ ಕೆರೆಯ ಕಾಲುವೆ ನವೀಕರಣ

668 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರ್): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಹಿರೇಕೆರೂರು ತಾಲ್ಲೂಕಿನ ಮದಗ ಮಾಸೂರು ನೀರಾವರಿ ಕೆರೆಯ ಕಾಲುವೆಯ ನವೀಕರಣ ವಿಸ್ತರಣೆ ಮತ್ತು ಏತ ನೀರಾವರಿ ಯೋಜನೆಯನ್ನು ರಾಷ್ಟ್ರೀಯ ನೀರು ನಿರ್ವಹಣಾ ಯೋಜನೆಯಲ್ಲಿ (ಎನ್.ಡಬ್ಲ್ಯೂ.ಎಂ.ಪಿ) ಕಾರ್ಯಗತ ಮಾಡಲು ರಾಜ್ಯ ಸರ್ಕಾರವು ಕೇಂದ್ರದ ಮಂಜೂರಾತಿಗಾಗಿ ಅಂದಾಜು ಪಟ್ಟಿಯನ್ನು ಕಳುಹಿಸಿದೆಯೇ?

ಆ) ಕೇಂದ್ರ ಸರ್ಕಾರವು ಈ ಯೋಜನೆಗೆ ಮಂಜೂರಾತಿ ನೀಡಿದೆಯೇ? ಹಾಗಿದ್ದಲ್ಲಿ ಈ ಯೋಜನೆಗಾಗಿ ನಿಗಧಿಗೊಳಿಸಿರುವ ಹಣವೆಷ್ಟು?

ಇ) ಈ ಕಾಮಗಾರಿಗಾಗಿ 1992-93ನೇ ಸಾಲಿನಲ್ಲಿ ಒದಗಿಸಲಾದ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು ?

ಈ) ಈ ಕಾಮಗಾರಿಯನ್ನು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಉ) ಈ ಯೋಜನೆಯ ಬಗ್ಗೆ ಈವರೆಗೆ ಕೈಗೊಂಡ ಕ್ರಮಗಳೇನು ಹಾಗೂ ಮುಂದೆ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಹೌದು.

ಆ) ಈ ಯೋಜನೆಯ ಪೂರ್ವಬಾವಿ ವರದಿಗೆ ಕೇಂದ್ರ ಸರ್ಕಾರವು ಒಪ್ಪಿಗೆ ನೀಡಿದೆ. ಸದರಿ ಯೋಜನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರೆತ ನಂತರ ಹಣವನ್ನು ನಿಗದಿಗೊಳಿಸಲಾಗುವುದು.

ಇ) 1992-93ನೇ ಸಾಲಿನಲ್ಲಿ ಈ ಯೋಜನೆಗೆ ಹಣವನ್ನು ಒದಗಿಸಿಲ್ಲ.

ಈ) ಈ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಿದ ನಂತರ ಮೂರು ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸುವ ಉದ್ದೇಶವಿದೆ.

ಉ) ಈ ಯೋಜನೆಯ ವರದಿಗೆ ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯ ಒಪ್ಪಿಗೆ ದೊರೆತಿದ್ದು ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗುವುದು.

ಕರ್ನಾಟಕ ಮಹಾರಾಷ್ಟ್ರ ಗಡಿ ಸಮಸ್ಯೆ ಕುರಿತು

816 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾರಾಷ್ಟ್ರದ ಸರ್ವಪಕ್ಷಗಳ ನಿಯೋಗವು ಪ್ರಧಾನಮಂತ್ರಿಗಳನ್ನು ಹಾಗೂ ಕೇಂದ್ರಮಂತ್ರಿಗಳನ್ನು ಭೇಟಿ ಮಾಡಿ ಗಡಿಪ್ರದೇಶಗಳಲ್ಲಿ ಅಭಿಪ್ರಾಯ ಸಂಗ್ರಹಣೆ ಮಾಡಬೇಕೆಂದು ಒತ್ತಾಯಪಡಿಸಿರುವುದು ನಿಜವೇ